4830(5677) ಶ್ರೀ ಪಾಟೀಲ್ ಡಿ.ಆರ್. (ಗದಗ್): ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) K.R.D.C ಸಂಸ್ಥೆಯಡಿಯಲ್ಲಿ ಗದಗ–ಬಾದಾಮಿ ರಸ್ತೆ ಸುಧಾರಣೆ ಕಾಮಗಾರಿಯು ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದಲ್ಲಿ, ಈ ಕಾಮಗಾರಿಯು ಪ್ರಾರಂಭವಾಗಿದ್ದು, ಯಾವಾಗ;

ಇ) ಒಪ್ಪಂದದ ಪ್ರಕಾರ ಮುಕ್ತಾಯವಾಗಬೇಕಾಗಿದ್ದು ಯಾವಾಗ;

ಈ) ಅನುಷ್ಠಾನಗೊಳಿಸುತ್ತಿರುವ ಗುತ್ತಿಗೆದಾರರು ಯಾರು;

ಉ) ಗುತ್ತಿಗೆದಾರರಿಗೆ ವಹಿಸಿ ಕೊಟ್ಟಿರುವ ಕಾಮಗಾರಿಯ ವಿವರ ನೀಡುವುದು;

ಊ) ಗುತ್ತಿಗೆದಾರರ ಕಾಮಗಾರಿಯ ಪ್ರಗತಿ ಹಾಗೂ ಗುಣಮಟ್ಟದ ಬಗ್ಗೆ ಪರಿಶೀಲಿಸುವ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿದೆ;

ಋ) ಗುತ್ತಿಗೆದಾರರು ಒಪ್ಪಂದದನ್ವಯ ನಡೆಯದಿದ್ದಲ್ಲಿ, ಅವರ ವಿರುದ್ಧ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) ಬಂದಿರುತ್ತದೆ.

ಗದಗ್–ರೋಣ್–ಬಾದಾಮಿಯ 72.40 ಕಿ.ಮೀ.ಗಳ ರಸ್ತೆಯನ್ನು ಒಟ್ಟು ರೂ.49.35 ಕೋಟಿಗಳ ಅಂದಾಜು ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಯನ್ನು 2 ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದ್ದು ಗದಗ್‌ನಿಂದ ರೋಣ ವರೆಗಿನ 40.60 ಕಿ.ಮೀ ಪ್ಯಾಕೇಜ್ 1ರ ಕಾಮಗಾರಿ ರೂ.30.75 ಕೋಟಿಗಳ ಗುತ್ತಿಗೆ ಮೊತ್ತದಲ್ಲಿ ಮತ್ತು ರೋಣದಿಂದ ಬಾದಾಮಿವರೆಗಿನ 31.80 ಕಿ.ಮೀ. ಪ್ಯಾಕೇಜ್–2ರ ಕಾಮಗಾರಿಯನ್ನು ರೂ.18.60 ಕೋಟಿಗಳ ಗುತ್ತಿಗೆ ಮೊತ್ತದಲ್ಲಿ ತೆಗೆದುಕೊಳ್ಳಲಾಗಿತ್ತು. ಗದಗಿನಿಂದ ರೋಣದವರೆಗೆ ಪ್ಯಾಕೇಜ್ 1ರ ಕಾಮಗಾರಿಗಳು ಕಾರ್ಯ ಸೂಚಿಯಂತೆ ಪ್ರಗತಿಯಲ್ಲಿದೆ. ಆದರೆ ರೋಣದಿಂದ ಬಾದಾಮಿವರೆಗಿನ ಎರಡನೇ ಪ್ಯಾಕೇಜ್‌ನ ಕಾಮಗಾರಿಯನ್ನು ಮೆ:ಆರ್.ಎಸ್.ಶೆಟ್ಟಿ ಮತ್ತು ಕಂ. ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಇದರಲ್ಲಿ 10 ಕಿ.ಮೀ. ಭಾಗದ ರಸ್ತೆಯನ್ನು

ಗುತ್ತಿಗೆದಾರರು ಕ್ರಿಯಾಶೀಲರಾಗಿ ನಿರ್ವಹಿಸುತ್ತಿರುತ್ತಾರೆ. ಕಾಮಗಾರಿಗಳ ಪ್ರಗತಿಯು ನಿಧಾನ ಗತಿಯಲ್ಲಿ ಇದ್ದುದರಿಂದ ಹಾಗೂ ಶೀಘ್ರವಾಗಿ ಪೂರೈಸಲು ರಸ್ತೆಯ ಉಳಿದ ಭಾಗವಾದ 21 ಕಿ.ಮೀ.ಅನ್ನು ಮೂಲ ಗುತ್ತಿಗೆದಾರರಿಂದ ಹಿಂದಕ್ಕೆ ಪಡೆದು ಈ ಭಾಗದ ರಸ್ತೆಗೆ ಬೇರೆ ಗುತ್ತಿಗೆಯನ್ನು ಕರೆದು ದಿನಾಂಕ 15–6–2005 ರಂದು ಗುತ್ತಿಗೆದಾರರಾದ ಮೆ: ಆರ್.ಎನ್.ನಾಯಕ್ ಅಂಡ್ ಸನ್ಸ್ ಇವರಿಗೆ ವಹಿಸಲಾಗಿದೆ.

ಆ) ಪ್ಯಾಕೇಜ್‌ಗಳ ಪ್ರಾರಂಭ ದಿನಾಂಕ ಈ ಕೆಳಗಿನಂತಿದೆ:

1.ಪ್ಯಾಕೇಜ್ 1 – ಫೆಬ್ರವರಿ 2004

2.ಪ್ಯಾಕೇಜ್ 2 – ಫೆಬ್ರವರಿ 2004 (ಮೊದಲ ಭಾಗ)

3.ಪ್ಯಾಕೇಜ್ 2 – ಜೂನ್ 2005 (ಎರಡನೇ ಭಾಗ)

ಇ) ಒಪ್ಪಂದದ ಪ್ರಕಾರ ಪ್ಯಾಕೇಜ್‌ಗಳ ಮುಕ್ತಾಯದ ದಿನಾಂಕ ಈ ಕೆಳಗಿನಂತಿದೆ:

1.ಪ್ಯಾಕೇಜ್ 1 – ಫೆಬ್ರವರಿ2006

2.ಪ್ಯಾಕೇಜ್ 2 – ಫೆಬ್ರವರಿ 2006 (ಮೊದಲ ಭಾಗ)

3.ಪ್ಯಾಕೇಜ್ 2 – ಡಿಸೆಂಬರ್ 2006(ಎರಡನೇ ಭಾಗ)

ಈ) ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವ ಗುತ್ತಿಗೆದಾರರ ಹೆಸರು ಈ ಕೆಳಗಿನಂತಿದೆ:

ಪ್ಯಾಕೇಜ್ 1 – ಮೆ: ಆರ್.ಮಹೇಶ್ವರನಾಯ್ಡು ಮತ್ತು ಪ್ರಕಾಶ್ (ಸಹಭಾಗಿತ್ವ)

ಪ್ಯಾಕೇಜ್ 2– (ಮೊದಲ ಭಾಗ) ಮೆ: ಆರ್.ಎಸ್.ಶೆಟ್ಟಿ & ಕಂ. ಇವರು ನಿರ್ವಹಿಸುತ್ತಿದ್ದಾರೆ.

ಪ್ಯಾಕೇಜ್ 2– (ಎರಡನೇ ಭಾಗ) ಮೆ: ಆರ್.ಎಸ್.ನಾಯಕ್ & ಸನ್ಸ್

ಉ) ಈ ಅಗಲೀಕರಣ ಮತ್ತು ಬಲಪಡಿಸುವ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳಾದ ರಸ್ತೆ ಅಗೆತ, ಸಬ್‌ಗ್ರೇಡ್, ಜಿ.ಎಸ್.ಬಿ., ಡಬ್ಲೂ.ಎಮ್.ಎಮ್., ಬಿ.ಎಮ್. ಮತ್ತು ಎಸ್.ಡಿ.ಬಿ.ಸಿ. ಅಲ್ಲದೇ ರಸ್ತೆ ಬದಿಗಳ ಮತ್ತು ಮೋರಿಗಳ ನಿರ್ಮಾಣಗಳನ್ನು ಒಳಗೊಂಡಿರುತ್ತದೆ.

ಊ) ಈ ಕಾಮಗಾರಿಗಳ ಗುಣಮಟ್ಟ ಪರಿಶೀಲನೆ ಜವಾಬ್ದಾರಿಯನ್ನು ಕೆಳಕಂಡ ಸಲಹೆಗಾರರಿಗೆ ವಹಿಸಿಕೊಡಲಾಗಿದೆ.

ಪ್ಯಾಕೇಜ್ 1 – ಮೆ:ಮುಕೇಶ್ ಅಸೋಸಿಯೇಟ್ಸ್ ಮತ್ತು

ಪ್ಯಾಕೇಜ್ 2 – ತಾಂತ್ರಿಕ ಸಲಹೆಗಾರರು ಮೆ:ಸೋವಿಲ್ (M/s SOWIL)

ಋ) ಗುತ್ತಿಗೆದಾರರು ಒಪ್ಪಂದದನ್ವಯ ಕಾರ್ಯನಿರ್ವಹಿಸದಿದ್ದಲ್ಲಿ ಅವರ ವಿರುದ್ಧ ಗುತ್ತಿಗೆ ಒಪ್ಪಂದದ ಅನ್ವಯ ಕ್ರಮವನ್ನು ಜರುಗಿಸಲಾಗುವುದು.

4831 (5673): ಶ್ರೀ ಕೆ. ಪ್ರಭಾಕರ್ ಬಂಗೇರ(ಬೆಳ್ತಂಗಡಿ): ಮಾನ್ಯ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಳ್ತಂಗಡಿ ಪ್ರದೇಶದಲ್ಲಿ ಇರುವ ಕ್ರೀಡಾಂಗಣದಲ್ಲಿ ಸಂಖ್ಯೆ ಎಷ್ಟು;

ಆ) ಬೆಳ್ತಂಗಡಿ ತಾಲ್ಲೂಕು ಕ್ರೀಡಾಂಗಣದ ಕಾಮಗಾರಿಯು ಯಾವ ಹಂತದಲ್ಲಿದೆ; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಇ) ಈ ಕ್ರೀಡಾಂಗಣದಲ್ಲಿ ಎಷ್ಟು ಮೀಟರ್‌ಗಳ ಟ್ರ್ಯಾಕ್ ನಿರ್ಮಾಣ ಮಾಡಲು ನಿಗಧಿಮಾಡಲಾಗಿದೆ;

ಈ) ಬೆಳ್ತಂಗಡಿ ತಾಲ್ಲೂಕಿನ ಇಂದಬೆಟ್ಟು ಎಂಬಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಮಂಜೂರು ಮಾಡಲಾದ ಜಮೀನಿನ ವಿಸ್ತೀರ್ಣ ಎಷ್ಟು; ಸದರಿ ಯೋಜನೆಯ ವಿವರಗಳೇನು;

ಉ) ಈ ಕ್ರೀಡಾಂಗಣ ನಿರ್ಮಾಣಕ್ಕಾಗಿ ನಿಗಧಿಗೊಳಿಸಿದ ಹಣದ ಮೊತ್ತ ಮತ್ತು ಅದರ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲು ಸರ್ಕಾರ ಯೋಜಿಸಿದೆ?

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು):

ಅ) 2 ಕ್ರೀಡಾಂಗಣಗಳಿವೆ.

1) ಬೆಳ್ತಂಗಡಿ ತಾಲ್ಲೂಕು ಕ್ರೀಡಾಂಗಣ

2) ಇಂದಬೆಟ್ಟು ಮಂಡಲ ಕ್ರೀಡಾಂಗಣ

ಆ) ಮತ್ತು ಇ) ಬೆಳ್ತಂಗಡಿ ತಾಲ್ಲೂಕು ಮಟ್ಟದ ಕ್ರೀಡಾಂಗಣವನ್ನು ರೂ. 23.50 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿಯನ್ನು 17.3.95 ರಲ್ಲಿ ನೀಡಲಾಗಿತ್ತು. ಈಗ ರೂ.54.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಅದರಂತೆ